# ನಾಯಿ ನೋಡಿಕೊಳ್ಳಲು ಕಷ್ಟವಾದಾಗ ಬೋರ್ಡಿಂಗ್‌ಗಳ ತಂಗುದಾಣ

ದಿನದ ಮಟ್ಟಿಗೋ ದೀರ್ಘ ಕಾಲದವರೆಗೋ ಮನೆಯಿಂದ ಹೊರಹೋಗಬೇಕಾದ ಸಂದರ್ಭ ಬಂದರೆ ಸಾಕುನಾಯಿಯನ್ನು ಏನು ಮಾಡುವುದು? ನಾಯಿ ಸಾಕಿದ ಎಲ್ಲರೂ ಒಂದಲ್ಲಾ ಒಂದು ಸಂದರ್ಭದಲ್ಲಿ ಎದುರಿಸಲೇಬೇಕಾದ ಪ್ರಶ್ನೆಯಿದು. ನಾಯಿ ಸಾಕಿದ ಕಾರಣಕ್ಕೆ ಬಂಧುಮಿತ್ರರ ಊರಿಗೆ ಹೋಗುವ ಹಾಗೂ ಪ್ರವಾಸದ ಸುಖವನ್ನು ಬಿಟ್ಟುಕೊಟ್ಟಿರುವ ತ್ಯಾಗಮೂರ್ತಿಗಳಿದ್ದಾರೆ. ಇಂಥವರಿಗೆ ಅನುಕೂಲ ಕಲ್ಪಿಸಲೆಂದೇ, ನಗರಪ್ರದೇಶಗಳಲ್ಲೀಗ 'ನಾಯಿ ಬೋರ್ಡಿಂಗ್' ಆರಂಭವಾಗಿದೆ. ನಾಯಿಗಳನ್ನು ಆರೈಕೆ ಮಾಡುವ, ಅವುಗಳ ಆರೋಗ್ಯದ ಕಾಳಜಿ ಮಾಡುವ ಈ ಬೋರ್ಡಿಂಗ್ ಕೇಂದ್ರಗಳು, ಉದ್ಯೋಗಸ್ಥ ನೌಕರರ ಮಕ್ಕಳ ಕಾಳಜಿ ಮಾಡುವ 'ಡೇ ಕೇರ್ ಸೆಂಟರ್'ಗಳಂತೆ ಕಾರ್ಯ ನಿರ್ವಹಿಸುತ್ತವೆ. ಬೆಂಗಳೂರು, ಮೈಸೂರು, ಚಿತ್ರದುರ್ಗ, ಹುಬ್ಬಳ್ಳಿ, ಮಂಗಳೂರುಗಳಂಥ ಜಿಲ್ಲಾ ಕೇಂದ್ರಗಳಲ್ಲಿ ನಾಯಿಗಳನ್ನು ನೋಡಿಕೊಳ್ಳುವ ಉದ್ಯಮ ನಿಧಾನಕ್ಕೆ ನೆಲೆ ಕಂಡುಕೊಳ್ಳುತ್ತಿದೆ. ಈ ಬೋರ್ಡಿಂಗ್ ಸೆಂಟರ್‌ಗಳನ್ನು ಉದ್ಯಮಕೇಂದ್ರಿತ ನಗರೀಕರಣದ ರೂಪದಲ್ಲಿ ನೋಡುವುದೊ, ಪ್ರಾಣಿಪ್ರೇಮದ ರೂಪದಲ್ಲಿ ನೋಡುವುದೊ ಅಥವಾ ವೃದ್ಧಾಶ್ರಮ, ಮಕ್ಕಳ ಡೇ ಕೇರ್ ಸೆಂಟರ್‌ಗಳ ಮುಂದುವರೆದ ರೂಪದಲ್ಲಿ ನೋಡಬೇಕೊ?

